ಪುಟ್ಟ ಗಾಜಿನ ಪೆಟ್ಟಿಗೆಯಲ್ಲಿ ಸಂಯೋಗ ಹೊಂದಿ ಭ್ರೂಣವಾಗುತ್ತವೆ. ಆ ಭ್ರೂಣಗಳಿಂದ ಮಕ್ಕಳು ಜನಿಸುತ್ತಿದ್ದಾರೆ. ದೈವಾನುಗ್ರಹವಿಲ್ಲದೆ ನರರು ತಮ್ಮಷ್ಟಕ್ಕೆ ತಾವೇ ಸೃಷ್ಟಿಸಿಕೊಂಡ ಪಾಪದ ಪಿಂಡಗಳಿವು. ದೇಹದಲ್ಲೆಲ್ಲೂ ಇಂಥ ಮಕ್ಕಳಿಗೆ ದೇವಲೋಕದ ಅದೃಶ್ಯ ಮುದ್ರೆಯಿರುವುದಿಲ್ಲ, ಲೆಕ್ಕವಿರುವುದಿಲ್ಲ. ದೇವಲೋಕದಲ್ಲಿ ಇವರ ಯಾವುದೇ ದಾಖಲಾತಿ ಇರುವುದಿಲ್ಲ. ಇವರನ್ನೆಲ್ಲ ನಮ್ಮ ಕಂಪ್ಯೂಟರ್‌ಗಳು ಬೇವರ್ಸಿಗಳೆಂದು ಪಟ್ಟಿ ಮಾಡುತ್ತಿದೆ. ಈ ಬೇವರ್ಸಿಗಳು ದೇವಲೋಕದಲ್ಲೆಲ್ಲ ಲಂಗುಲಗಾಮಿಲ್ಲದಂತೆ ಅಂಡಲೆಯುತ್ತ ಅಬ್ಬರಿಸುತ್ತಿದ್ದಾರೆ. ಅವಕ್ಕೇನು ದೇವರ ಭಯವೇ? ಭಕ್ತಿಯೇ? ಸಂಸ್ಕಾರವೇ? ಎಂಥ ಕಾಲ, ಎಂಥ ಹೊತ್ತು? ಪರಮಾತ್ಮ!' ಎಂದು ಅರಚಿದ. ಅದಕ್ಕೆ ಮತ್ತೊಬ್ಬ 'ನಿನಗೇತಕ್ಕೆ ಇಲ್ಲದ ಉಸಾಬರಿ? ಅವರನ್ನೂ ತಣ್ಣಗೆ ಶೆಡ್ಡಿಗೆ ತಳ್ಳು!' ಎಂದ.

ಮೊದಲನೆಯವನು 'ನೀನೇಳೋದು ಸರಿ. ಆದರೆ ದಿನವೂ ಒಂದೂವರೆ ಲಕ್ಷ ಜನ ಬಂದು ಶೆಡ್ಡಲ್ಲಿ ಸೇರಿಕೊಳ್ಳುತ್ತಿದ್ದಾರೆ. ಎಲ್ಲರನ್ನೂ ಶೆಡ್ಡಿಗೆ ನೂಕಿದರೆ ಅವರ ಗತಿಯೇನು? ಅಲ್ಲಿ ಜಾಗ, ನೀರು, ಊಟ, ತಿಂಡಿ, ನೆರಳು ಏನೇನೂ ಸಾಲದು. ಒಬ್ಬನಿರಬಹುದಾದ ಜಾಗದಲ್ಲಿ ನೂರಾರು ಜನರನ್ನು ತುಂಬಿರುವುದರಿಂದ ಕಜ್ಜಿ, ತುರಿ, ಭೇದಿ, ಕೆಮ್ಮು, ಸಾಂಕ್ರಾಮಿಕ ರೋಗಗಳು ಸ್ಫೋಟಗೊಂಡಿವೆ. ಮಕ್ಕಳು ಮತ್ತು ಮಹಿಳೆಯರನ್ನು ಕಣ್ಣೆತ್ತಿ ನೋಡಲಾಗುತ್ತಿಲ್ಲ. ಇಡೀ ದೇವಲೋಕವೇ ಜನರ ಸೀನು, ಕೆಮ್ಮು, ದಮ್ಮು, ಮೈ ಕೈ ಕೆರೆತ, ಗೊಣಗಾಟ, ನಿಟ್ಟುಸಿರು, ಉಗುಳು, ಕಫ, ಕೀವು, ರಕ್ತ, ಮಲ ಮೂತ್ರಗಳ ಗಬ್ಬು ವಾಸನೆಯಿಂದ ತುಂಬಿ ಹೋಗಿದೆ. ಒಂದಷ್ಟು ಜನ ಖಿನ್ನತೆಗೆ ಒಳಗಾದರೆ, ಮತ್ತಷ್ಟು ಜನ ಹುಚ್ಚು ಹಿಡಿದು ಕುಣಿಯುತ್ತಿದ್ದಾರೆ. ಎಲ್ಲಿ ನೋಡಿದರೂ ಗ್ಯಾನ ತಪ್ಪಿ ಬಿದ್ದವರ ರಾಶಿ. ಜನರ ಕಣ್ಣಲ್ಲಿ ಭೀತಿ ಮನೆ ಮಾಡಿದೆ. ನೋಡಲು ಭೀಕರವಾಗಿದೆ. ಎಲ್ಲರೆದುರೇ ಆತ್ಮಹತ್ಯೆ ಪ್ರಯತ್ನಗಳು ನಡೆಯುತ್ತಿವೆ. ಸಾಯಲು ಸಾಧ್ಯವಿಲ್ಲವೆಂದು ಗೊತ್ತಿದ್ದರೂ ಎಲ್ಲರಿಗೂ ಸಾಯುವ ಹಪಾಪಿತನ. ದೇವಲೋಕಕ್ಕಿನ್ನ ಸಾವೇ ಮೇಲು ಎಂದಾದರೆ ಜನರ ಮನಸ್ಥಿತಿ ಊಹಿಸಿ. ಎಲ್ಲ ಗಂಡಸರ ಮುಖದ ಮೇಲೂ ಮಾರುದ್ದ ಗಡ್ಡ ಮೀಸೆ ಬೆಳೆದು ದೆವ್ವಗಳೇ ಹೆದರಿ ಓಡುವಂತಾಗಿದೆ. ಒಂದಾದರೂ ಮಗು ಅಥವಾ ಹೆಂಗಸು ಎದ್ದು ಓಡಾಡಿದ್ದನ್ನೇ ನಾನು ಕಂಡಿಲ್ಲ. ದೈವವೇಕೋ ಎಲ್ಲರ ಮೇಲೆ ಸೇಡು ತೀರಿಸಿಕೊಳ್ಳುವಂತೆ ಯರ್‍ರಾಬಿರ್‍ರಿಯಾಗಿ

